(ಅ) ಹೌದು

(ಇ) 51

(ಈ) ಈ ಎಲ್ಲಾ ಪ್ರಕರಣಗಳಲ್ಲೂ ಅಕ್ರಮ ಗಣಿಗಾರಿಕೆಯನ್ನು ಈಗ ತಡೆಗಟ್ಟಲಾಗಿದೆ. ಹಾಗೂ ದಂಡ ರೂಪದಲ್ಲಿ 50,375.00 ರೂ. ಗಳನ್ನು ವಸೂಲಿ ಮಾಡಲಾಗಿದೆ.

ಬೆಳ್ತಂಗಡಿ ತಾಲ್ಲೂಕು ಪ್ರದೇಶದ ಗಂಗಾ ಕಲ್ಯಾಣ ಯೋಜನೆ.

1644 (2233) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಳ್ತಂಗಡಿ ತಾಲ್ಲೂಕಿನ ಇಂದಬೆಟ್ಟು ಪರಿಶಿಷ್ಟ ಜಾತಿಯವರ ಕಾಲೋನಿಯಲ್ಲಿ ಜಾರಿಗೊಳಿಸಲಾಗಿರುವ ಗಂಗಾ ಕಲ್ಯಾಣ ಯೋಜನೆಯಲ್ಲಿನ ಫಲಾನುಭವಿಗಳು ವಿದ್ಯುತ್ ಬಿಲ್‌ನ್ನು ಕಟ್ಟದೆ ಇದ್ದ ಕಾರಣ ಇಲಾಖೆಯವರು ಸಂಪರ್ಕ ಕಡಿತ ಮಾಡಿರುವ ವಿಚಾರವನ್ನು ಸರ್ಕಾರವು ಗಮನಿಸಿದೆಯೇ; ಗಮನಿಸಿದ್ದಲ್ಲಿ ಆ ಕುರಿತು ಸರ್ಕಾರದ ಕ್ರಮಗಳೇನು;

(ಆ) ಬಡ ಪರಿಶಿಷ್ಟರ ಆರ್ಥಿಕ ಸ್ಥಿತಿಗತಿಗಳನ್ನು ಪರಿಗಣಿಸಿ ಬಾಕಿ ಬಿಲ್ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಯವರು ಭರಿಸಿ, ಮರುಸಂಪರ್ಕ ಕಲ್ಪಿಸಿಕೊಟ್ಟು ಬಡವರಿಗೆ ಯೋಜನೆಯ ಪ್ರತಿಫಲ ಲಭ್ಯವಾಗುವಂತೆ ಮಾಡಲು ಸರ್ಕಾರ ಮುಂದಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಬೆಳ್ತಂಗಡಿ ತಾಲ್ಲೂಕಿನ ಇಂದುಬೆಟ್ಟು ಪರಿಶಿಷ್ಟ ಜಾತಿಯವರ ಕಾಲೋನಿಯಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು 1991-92ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ್ದು, 1996-97ನೇ ಸಾಲಿನಲ್ಲಿ ಫಲಾನುಭವಿಗಳು ವಿದ್ಯುತ್ ಬಿಲ್ಲನ್ನು ಪಾವತಿಸದೇ ಇದ್ದ ಕಾರಣ ವಿದ್ಯುತ್ ಸಂಪರ್ಕವನ್ನು ನಿಲುಗಡೆ ಮಾಡಲಾಗಿತ್ತು. ಫಲಾನುಭವಿಗಳು ಮಾಡಿದ ಮನವಿ ಮೇರೆಗೆ ದಿನಾಂಕ 29-10-96ರ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಸದರಿ ವಿಷಯದಲ್ಲಿ ಚರ್ಚೆಸಲಾಗಿದೆ. ಫಲಾನುಭವಿಗಳು ಸೊಸೈಟಿಯೊಂದನ್ನು ರಚಿಸಿ ಪೂರ್ಣ ನಿರ್ವಹಣೆಯನ್ನು ನೋಡಿಕೊಳ್ಳುವುದಾಗಿ ಕರಾರು ಪತ್ರ ಪಡೆದು ಫಲಾನುಭವಿಗಳ ಹಿತದೃಷ್ಟಿಯಿಂದ ಬಾಕಿ ಇರುವ ವಿದ್ಯುತ್ ಬಿಲ್ಲು ರೂ. 23825.00 ಗಳನ್ನು ವಿಶೇಷ ಘಟಕ ಯೋಜನೆಯಿಂದ ಕರ್ನಾಟಕ ವಿದ್ಯುತ್ ಮಂಡಳಿಗೆ ಪಾವತಿಸಲಾಗಿತ್ತು.

(ಆ) 'ಇಲ್ಲ' ಫಲಾನುಭವಿಗಳೇ ಬರೆದು ಕೊಟ್ಟ ಕರಾರು ಪತ್ರದ ಪ್ರಕಾರ ಈಗಿನ ವಿದ್ಯುತ್ ಶುಲ್ಕವನ್ನು ಫಲಾನುಭವಿಗಳೇ ತಮ್ಮ ಸಂಘದ ಮೂಲಕ ಭರಿಸಬೇಕಾಗಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಸಮಾಜ ಕಲ್ಯಾಣ ಇಲಾಖಾ ಸಿಬ್ಬಂದಿ

1645 (2234) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?